# ಅಂತರಗಂಗೆ

**ನೀರನ್ನೇ ಹೀರಿ ಬದುಕುವ, ನೀರಿನ ಜತೆಗೆ ಮಣ್ಣಿನ ಸಾರವನ್ನೂ ಕುಂಠಿತಗೊಳಿಸುವ ಈ ಜಲಸಸ್ಯ ಕೃಷಿಕರಿಗೆ ತಲೆನೋವು. ಆದರೆ ಇದರ ಔಷಧೀಯ ಗುಣಗಳಿಂದಾಗಿ ವೈದ್ಯರಿಗೆ ಅಚ್ಚುಮೆಚ್ಚು!**

■ ಚಿತ್ರ ಬರಹ:
**ಜಯಶೇಖರ್ ಮಡಪ್ಪಾಡಿ**



ಮನೆಯಂಗಳದ ಮಡಕೆಯಲ್ಲಿ ಶೃಂಗಾರಕ್ಕೆಂದು ಬಳಸುವ, ನೋಡುಗರ ಕಣ್ಮನಗಳಿಗೆ ಸೌಂದರ್ಯ ನೀಡುವ ಅಂತರಗಂಗೆ ಎಂಬ ಜಲ ಸಸ್ಯಗಳು ಎಲ್ಲಾ ಕಡೆಗಳಲ್ಲಿ ವ್ಯಾಪ್ತಿ ವಿಸ್ತರಿಸಿಕೊಳ್ಳುತ್ತಿದೆ. ಕೆರೆ, ಬಾವಿಗಳಲ್ಲಿ ತನ್ನ ಸಂತಾನೋತ್ಪತ್ತಿಯ ಮೂಲಕ ಪರಿಸರದ ಮೇಲೆ ತೀವ್ರ ಪ್ರಹಾರ ಮಾಡುತ್ತಿದೆ.

ಇದೊಂದು ಕೆಸುವಿನ ಕುಟುಂಬಕ್ಕೆ ಸೇರಿದ ಜಲ ಸಸ್ಯ. ವೈಜ್ಞಾನಿಕ ಹೆಸರು ಪಿಸ್ಟಿಯಾ ಸ್ಟ್ರಾಟಿಯೋಟಸ್. ಗ್ರೀಕ್‌ನಲ್ಲಿ ಪಿಸ್ಟಿಯಾ ಅಂದರೆ ನೀರು. ಲ್ಯಾಟಿನ್ ಭಾಷೆಯಲ್ಲಿ ಸ್ಟ್ರಾಟಿಯೋಟಸ್ ಎಂದರೆ ಸಾಲು ಸಾಲಾಗಿ ಅಥವಾ ಸೈನಿಕರ ಹಾಗೆ ಎನ್ನುವ ಅರ್ಥ ಕೊಡುವುದರಿಂದ ನೀರಿನಲ್ಲಿ ಸಾಲು ಸಾಲಾಗಿ ತೇಲುತ್ತಾ ಬೆಳೆಯುವ ಸಸ್ಯ ಎನ್ನಬಹುದು. ಅಂತರ ತಾಮರೆ, ಆಕಾಶ ತಾಮರೆ, ಎಂಬಿತ್ಯಾದಿ ಕನ್ನಡ ಹೆಸರುಗಳಿದ್ದು, ಸಂಸ್ಕೃತದಲ್ಲಿ ಜಲಕುಂಭಿಕ ಎಂದು ಕರೆಯುತ್ತಾರೆ.

ಅಂತರ ಗಂಗೆಯಲ್ಲಿ ಮೂರು ಭಾಗಗಳಿವೆ. ಅಂತರಗಂಗೆಯ ಬೇರು ಹಾಗೂ ಸೊಪ್ಪಿನ ಮಧ್ಯ ಅಥವಾ ಬುಡವನ್ನು ಗಿಣ್ಣು ಎಂದು ಕರೆದರೆ, ಒಂದು ಸಸ್ಯದಿಂದ ಇನ್ನೊಂದು ಸಸ್ಯಕ್ಕೆ ಮಧ್ಯೆ ಇರುವ ದಾರದಂತಹ ಕೊಂಡಿಯನ್ನು ಅಂತರ ಗಿಣ್ಣು ಎನ್ನುತ್ತಾರೆ. ಬೇರು, ಸೊಪ್ಪು ಹಾಗೂ ಅಂತರ ಗಿಣ್ಣು ಒಟ್ಟಾಗಿ ಕಂದು ಎಂದು ಕರೆಯಲ್ಪಡುತ್ತದೆ.

20 ಅಡಿಗಿಂತ ಕಡಿಮೆ ಆಳದ, ನಿಂತ ನೀರಿನಲ್ಲಿ ಅಂದರೆ ಕೆರೆ, ಬಾವಿಗಳಲ್ಲಿ ಬಹಳ ಬೇಗನೆ ವಿಸ್ತರಿಸಿ ಬೆಳೆಯುವ ಅಂತರಗಂಗೆ, ನೀರನ್ನೇ ಹೀರಿ ಬದುಕುವ ಸಸ್ಯ. ಒಂದು ಸಣ್ಣ ಚಿಗುರು ಇದ್ದರೂ ತನ್ನ ವಂಶವನ್ನು ಬೆಳೆಸಿಕೊಂಡುಬಿಡುವ ಅದ್ಭುತ ಶಕ್ತಿ ಈ ಸಸ್ಯಕ್ಕೆ ಇದೆ.

(6ನೇ ಪುಟ ನೋಡಿ)